# ಪದವಿ ಪೂರ್ವ ಶಿಕ್ಷಣ ಇಲಾಖೆ

**ದಿನಾಂಕ: 30-01-2012 ರಂದು ಅರ್ಹ ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರಿಗೆ ಅಧೀಕ್ಷಕರ ಹುದ್ದೆಗೆ ಬಡ್ತಿ ನೀಡುವ ಕುರಿತು ನಡೆದ ಇಲಾಖಾ ಮುಂಬಡ್ತಿ ಸಭೆ ನಡವಳಿ:**

<u>ಉಪಸ್ಥಿತರು</u>:-

1. ಶ್ರೀಮತಿ ವಿ ರಶ್ಮಿ *ಐ ಎ ಎಸ್,*
   ಆಯುಕ್ತರು.
2. ಶ್ರೀಮತಿ ಜಿ ಹೆಚ್ ದ್ರಾಕ್ಷಾಯಿಣಿದೇವಿ,
   ಜಂಟಿ ನಿರ್ದೇಶಕರು (ಆಡಳಿತ).
3. ಶ್ರೀ ಪುಟ್ಟಯ್ಯ,
   ಉಪನಿರ್ದೇಶಕರು (ಆಡಳಿತ).

ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಒಟ್ಟು 50 ಅಧೀಕ್ಷಕರ ಹುದ್ದೆಗಳಿರುತ್ತವೆ. ಈ ಪೈಕಿ ಖಾಲಿ ಇರುವ ಹಾಗೂ ಖಾಲಿ ಆಗಲಿರುವ ಅಧೀಕ್ಷಕರ ಹುದ್ದೆಗಳ ವಿವರ ಈ ಕೆಳಕಂಡಂತಿದೆ:

| ಕ್ರ ಸಂ | ಹುದ್ದೆ ಮತ್ತು ಸ್ಥಳ | ಕಾರಣ ಮತ್ತು ಯಾವ ದಿನಾಂಕದಿಂದ ಖಾಲಿಯಾಗಲಿದೆ. |
|---|---|---|
| 1. | ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಶ್ರೀ ಎಂ ಜಿ ವಿನಾಯಕ್ ರವರ ವರ್ಗಾವಣೆ 18/08/2007 |
| 2. | ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಶ್ರೀಮತಿ ವಿರಾಜಮ್ಮಣ್ಣಿ ಇವರ ವಯೋ ನಿವೃತ್ತಿ 31/01/2011 |
| 3. | ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಶ್ರೀ ಟಿ ಸಿ ಚಂದ್ರಶೇಖರ್ ಇವರ ವಯೋ ನಿವೃತ್ತಿ 30/06/2011 |
| 4. | ಉಪ ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ | ಶ್ರೀ ಜೆ ಹೆಚ್ ರವೀಂದ್ರ ರವರ ವರ್ಗಾವಣೆ 01/07/2011 |
| 5. | ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಚಾಮರಾಜನಗರ | ಶ್ರೀ ಬಸವಾನಾಯಕ್ ಇವರ ನಿಧನ 30/07/2011 |
| 6. | ಉಪ ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ | ಶ್ರೀ ಎಸ್ ಟಿ ತಿಮ್ಮಯ್ಯ ಇವರ ವಯೋ ನಿವೃತ್ತಿ 30/11/2011 |
| 7. | ಪದವಿ ಪೂರ್ವ ಶಿಕ್ಷಣ ಪರೀಕ್ಷಾ ಮಂಡಳಿಗೆ | ಮರು ವಿನ್ಯಾಸದಿಂದ ಸೃಜನೆ – 08 ಹುದ್ದೆಗಳು |
| 8. | ನಿರ್ದೇಶನಾಲಯ/ಪರೀಕ್ಷಾ ಮಂಡಳಿ | ಖಾಲಿ ಇರುವ ಶಾಖಾಧಿಕಾರಿ ಹುದ್ದೆಗಳಿಗೆ ಅಧೀಕ್ಷಕರ ವೃಂದದಿಂದ ಬಡ್ತಿ – 10 ಹುದ್ದೆಗಳು |
| 9. | ಡಿಸೆಂಬರ್ 2012 ರವರೆಗೆ | ನಿವೃತ್ತಿಯಿಂದ ತೆರವಾಗುವ ಹುದ್ದೆಗಳಿರುವುದಿಲ್ಲ |
| | ಒಟ್ಟು ಖಾಲಿ ಇರುವ ಮತ್ತು ಖಾಲಿ ಆಗುವ ಹುದ್ದೆಗಳ ಸಂಖ್ಯೆ | 24 |

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 71 ಎಸ್‌ಆರ್‌ಇ 94 ದಿನಾಂಕ: 27-5-1998ರಲ್ಲಿ ಹೊರಡಿಸಿರುವ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ

ಹುದ್ದೆಗಳನ್ನು "By Promotion from the cadre of First Division Assistants and Stenographers in the ratio 5:1, every sixth vacancy being filled by promotion from the cadre of Stenographers" ಮೂಲಕ ತುಂಬಲು ಅವಕಾಶವಿರುತ್ತದೆ.

ಆದರೆ, ಸರ್ಕಾರದ ಆದೇಶ ಸಂಖ್ಯೆ: ಇಡಿ 176 ಟಿಪಿಯು 97 ದಿನಾಂಕ: 28-5-2001ರ ಆದೇಶದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ 176 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ಪ್ರಥಮ ದರ್ಜೆ ಸಹಾಯಕರ ವೃಂದಕ್ಕೆ ಸೇರ್ಪಡೆಯಾಗಿರುವ ಕಾರಣ ಪರಷ್ಕೃತ ವೃಂದ ಬಲವನ್ನು ಪರಿಗಣಿಸಿ ಪ್ರ ದ ಸ ಮತ್ತು ಶೀಘ್ರಲಿಪಿಗಾರರ ನಡುವಿನ ಅನುಪಾತವನ್ನು ದಿನಾಂಕ: 28-5-2001ರಿಂದಲೇ ಅನುಪಾತವನ್ನು ಪರಿಷ್ಕರಿಸಲು ಹಾಗು ಪರಿಷ್ಕರಿಸಿದ ಅನುಪಾತದಂತೆ ಬಡ್ತಿ ನೀಡಲು 12 ಪ್ರಥಮ ದರ್ಜೆ ಸಹಾಯಕರು ಮನವಿ ಸಲ್ಲಿಸಿರುತ್ತಾರೆ. ಅಧೀಕ್ಷಕರ ಹುದ್ದೆಗೆ ಬಡ್ತಿ ನೀಡುವಾಗ ಇರುವ ಅನುಪಾತವನ್ನು ಬದಲಾವಣೆ ಮಾಡುವ ವಿಷಯದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಕುರಿತು ವೃಂದ ಪರಿಶೀಲನಾ ಸಮಿತಿಯ ಚರ್ಚೆ ಹಾಗು ಸರ್ಕಾರದ ಪರಿಶೀಲನೆಯ ಹಂತದಲ್ಲಿದ್ದು ಪರಿಷ್ಕರಿಸಿದ ಅನುಪಾತವು ನಿಯಮಗಳಿಗೆ ತಿದ್ದಪಡಿ ತಂದ ನಂತರ ಅಳವಡಿಸಿಕೊಳ್ಳಬೇಕಾಗುತ್ತದೆ.

ಆದುದರಿಂದ ಈ ಎರಡು ವೃಂದಗಳಿಂದ ಬಡ್ತಿ ನೀಡುವಾಗ ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿರುವ ಅನುಪಾತವನ್ನು ಅನುಸರಿಸಿ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 5 ಎಸ್‌ಬಿಸಿ 80 ದಿನಾಂಕ: 19-1-1980ರಲ್ಲಿ ನೀಡಿದ ಸೂಚನೆಗಳಂತೆ ಎರಡೂ ವೃಂದಗಳಿಗೆ ಪ್ರತ್ಯೇಕ ರೋಸ್ಟರ್ ಪಾಲಿಸಿ ಬಡ್ತಿ ನೀಡಬೇಕಾಗಿರುತ್ತದೆ.

ದಿನಾಂಕ: 23-8-2007 ರಂದು ಪ್ರಥಮ ದರ್ಜೆ ಸಹಾಯಕರ ಮತ್ತು ಶೀಘ್ರಲಿಪಿಗಾರರ ವೃಂದದಿಂದ ಅಧೀಕ್ಷಕರ ಹುದ್ದೆಗೆ ನಡೆದ ಇಲಾಖಾ ಮುಂಬಡ್ತಿ ಸಭೆ ನಡವಳಿಯಂತೆ ಶೀಘ್ರಲಿಪಿಗಾರರ ವೃಂದದ ರೋಸ್ಟರ್ ಬಿಂದು 10ಕ್ಕೆ ಕೊನೆಗೊಂಡಿರುವುದನ್ನು, ಮತ್ತು ದಿನಾಂಕ: 10-12-2009 ರಂದು ಪ್ರಥಮ ದರ್ಜೆ ಸಹಾಯಕರ ಮತ್ತು ಶೀಘ್ರಲಿಪಿಗಾರರ ವೃಂದದಿಂದ ಅಧೀಕ್ಷಕರ ಹುದ್ದೆಗೆ ನಡೆದ ಇಲಾಖಾ ಮುಂಬಡ್ತಿ ಸಭೆ ನಡವಳಿಯಂತೆ ಹಾಗು ದಿನಾಂಕ: 27-4-2010 ರಂದು ಪ್ರಥಮ ದರ್ಜೆ ಸಹಾಯಕರ ಮತ್ತು ಶೀಘ್ರಲಿಪಿಗಾರರ ವೃಂದದಿಂದ ಅಧೀಕ್ಷಕರ ಹುದ್ದೆಗೆ ನಡೆದ ಇಲಾಖಾ ಮುಂಬಡ್ತಿ ಸಭೆ ನಡವಳಿಯಂತೆ ಪ್ರ ದ ಸ ವೃಂದದಲ್ಲಿ ರೋಸ್ಟರ್ ಬಿಂದು 5ಕ್ಕೆ ಕೊನೆಗೊಂಡಿರುವುದನ್ನು ಸಭೆಯು ಪರಿಶೀಲಿಸಿ ಖಚಿತಪಡಿಸಿಕೊಂಡಿರುತ್ತದೆ. ಪ್ರಸ್ತುತ ಶೀಘ್ರಲಿಪಿಗಾರರ ವೃಂದದಲ್ಲಿ ಬಡ್ತಿಗೆ ಅರ್ಹರಾದ ಮತ್ತು ಅಗತ್ಯ ತರಬೇತಿ ಪಡೆದ 4 ಅಭ್ಯರ್ಥಿಗಳಿರುತ್ತಾರೆ. ಅಧೀಕ್ಷಕರ ವೃಂದದಲ್ಲಿ ಯಾವುದೇ ಬ್ಯಾಕ್‌ಲಾಗ್ ಹುದ್ದೆ ಇರುವುದಿಲ್ಲ. ಪ್ರಥಮ ದರ್ಜೆ ಸಹಾಯಕರ ವೃಂದದಿಂದ ಕಳೆದ ಬಾರಿ ಬಡ್ತಿ

ನೀಡಿದಾಗ ಕೊನೆಯ ರೋಸ್ಟರ್ ಬಿಂದು 5 ಆಗಿತ್ತು. ಶೀಘ್ರಲಿಪಿಗಾರರ ವೃಂದದಿಂದ ಕಳೆದ ಬಾರಿ ಬಡ್ತಿ ನೀಡಿದಾಗ ರೋಸ್ಟರ್ ಬಿಂದು 10 ಆಗಿತ್ತು.

ಹಿಂದಿನ ಬಡ್ತಿಯ ಸಮಯದಲ್ಲಿ ಅಂದರೆ, ದಿನಾಂಕ: 27-4-2010 ರಲ್ಲಿ ಬಡ್ತಿ ನೀಡಿದಾಗ, ಶ್ರೀಮತಿ ಎನ್.ಪಿ.ಗಂಗಮ್ಮ ಶ್ರೀಮತಿ ಎ.ಕೆ.ಪುಷ್ಪಾವತಿ ಮತ್ತು ಶ್ರೀಮತಿ ಜ್ಯೋತಿ ಕುಲಕರ್ಣಿ, ಇವರು ಬಡ್ತಿ ಮುಂದೂಡಲು ಲಿಖಿತವಾಗಿ ಬರೆದುಕೊಟ್ಟ ಹಿನ್ನಲೆಯಲ್ಲಿ ಕ.ನಾ.ಸೇ. (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 4 ರಂತೆ ಬಡ್ತಿಯನ್ನು ಮುಂದೂಡಲು ಅವಕಾಶ ಕಲ್ಪಿಸಲಾಗಿತ್ತು. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮತ್ತು ಜಿಲ್ಲಾ ಉಪನಿರ್ದೇಶಕರ ಕಛೇರಿಗಳ್ಲಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರ ಕುರಿತಂತೆ ಜಿಲ್ಲಾ ಉಪನಿರ್ದೇಶಕರು ಅವರ ಮೇಲೆ ಇಲಾಖಾ ವಿಚಾರಣೆಗಳಿಲ್ಲದಿರುವುದನ್ನು ಹಾಗು ಆಯುಕ್ತಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರ ಮತ್ತು ಶೀಘ್ರಲಿಪಿಗಾರರ ಕುರಿತಂತೆ ಆಡಳಿತ ವಿಭಾಗದ ಉಪನಿರ್ದೇಶಕರು ಅವರ ಮೇಲೆ ಇಲಾಖಾ ವಿಚಾರಣೆಗಳಿಲ್ಲದಿರುವುದನ್ನು ದೃಢಪಡಿಸಿರುತ್ತಾರೆ. ಶೀಘ್ರಲಿಪಿಗಾರರ ಮತ್ತು ಪ್ರಥಮ ದರ್ಜೆ ಸಹಾಯಕರ ವೃಂದದಿಂದ ಮತ್ತು ಶೀಘ್ರಲಿಪಿಗಾರರ ಜೇಷ್ಠತೆಯಂತೆ ಈ ಕೆಳಕಂಡ ಅಭ್ಯರ್ಥಿಗಳಿಗೆ ಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಭೆಯು ಪರಿಗಣಿಸಿತು.

| ಕ್ರಸಂ | ಹುದ್ದೆ ಸಂಖ್ಯೆ | ರೋಸ್ಟರ್ ಬಿಂದು | ಹೆಸರು |
|---|---|---|---|
| 01 | 04 | 06 | ಗಂಗಮ್ಮ ಎಸ್.ಪಿ. |
| 02 | 05 | 07 | ಸಿದ್ದಲಿಂಗಸ್ವಾಮಿ ಎಂ.ಬಿ. (ಪ ಜಾ) |
| 03 | 06 | 11 | ರಾಧಮ್ಮ ಆರ್. |
| 04 | 07 | 08 | ಪುಷ್ಪಾವತಿ ಎ.ಕೆ |
| 05 | 08 | 09 | ಜ್ಯೋತಿ ಕುಲಕರ್ಣಿ |
| 06 | 09 | 10 | ನಿತಿನ್ ಬಿ.ಟಿ. |
| 07 | 10 | 11 | ರಮೇಶ್ ಎಂ. |
| 08 | - | - | ಪ್ರವೀಣ್ ಬಲ್ಲಾಳ್-ಇಲಾಖಾ ವಿಚಾರಣೆ ಬಾಕಿ ಇರುತ್ತದೆ |
| 09 | 11 | 12 | ಭಾಗ್ಯಲಕ್ಷ್ಮಿ |
| 10 | 12 | 12 | ಸುಭಾಶ್‌ಚಂದ್ರ (ಪ ಜಾ) |
| 11 | 13 | 13 | ಪ್ರಸನ್ನ ಕೆ. |
| 12 | 14 | 14 | ವರಹಾಲಮ್ಮ ಪಿ. (ಪ ಜಾ) |
| 13 | 15 | 15 | ಸದಾಶಿವಪ್ಪ ಎಂ. |
| 14 | 16 | 16 | ಆಶಾರಾಣಿ |
| 15 | 17 | 17 | ರಾಜೇಗೌಡ ಬಿ.ಎಂ. |
| 16 | 18 | 13 | ಜಯಲಕ್ಷ್ಮಿ ಎಸ್.ಎಂ. |
| 17 | 19 | 18 | ಜೆ.ಎನ್. ವಿರೂಪಾಕ್ಷಪ್ಪ |
| 18 | - | - | ಚಂದ್ರಕಾಂತ ವೆಂಕಮನಿ-ಜನರಲ್ ಲಾ-ಭಾಗ-1 ಪಾಸಾಗಿಲ್ಲ |

| | | | |
|---|---|---|---|
| 19 | 20 | 19 | ಅಶ್ವಥ ನಾರಾಯಣ್ |
| 20 | 21 | 20 | ಕಲಾದಗಿ ಎಸ್.ಎಸ್. |
| 21 | 22 | 21 | ಪುರಂದರ ಪಿ. (ಪ ಜಾ) |
| 22 | 23 | 22 | ಎಂ.ಎನ್. ವಿಜಯಲಕ್ಷ್ಮಿ |
| 23 | 24 | 14 | ಯಲ್ಲಪ್ಪ (ಪ ಪಂ) |
| 24 | 25 | 23 | ಲಿಂಗಪ್ಪ ಸಿ.ಎಸ್. |
| 25 | - | - | ರಮಾಕಾಂತ್ ಎನ್ ಶೇಟ್- ಜನರಲ್ ಲಾ-ಭಾಗ-1 ಪಾಸಾಗಿಲ್ಲ |
| 26 | - | - | ಶಫೀಉಲ್ಲಾ ಎ- ಅಕೌಂಟ್ಸ್ ಹೈಯರ್ ಪಾಸಾಗಿಲ್ಲ. |
| 27 | 26 | 24 | ಬಾಲಕೃಷ್ಣೇಗೌಡ |
| 28 | 27 | 25 | ಗಂಗಮ್ಮ ಎ.ಟಿ. |
| 29 | 28 | 26 | ಸಿಂಜಾವ್ ಎಸ್.ಪಿ |
| 30 | 29 | 27 | ಮುರಳೀಧರ ಕೆ.ಆರ್. (ಪ ಜಾ) |
| 31 | 30 | - | ಶೀಘ್ರಲಿಪಿಗಾರರ ವೃಂದದ ಅಭ್ಯರ್ಥಿಗಳಿರುವುದಿಲ್ಲ |
| 32 | 31 | 28 | ಹಿರಣ್ಣಯ್ಯ ಹೆಚ್.ಸಿ. |

ಕ್ರಮ ಸಂಖ್ಯೆ 8ರಲ್ಲಿರುವ ಪ್ರಥಮ ದರ್ಜೆ ಸಹಾಯಕರಾದ ಶ್ರೀ ಪ್ರವೀಣ್ ಬಲ್ಲಾಳ್‌ರವರ ಮೇಲೆ ಇಲಾಖಾ ವಿಚಾರಣೆ ಬಾಕಿ ಇರುವ ಕಾರಣ ಅವರ ಡೋಸಿಯರ್‌ಗಳನ್ನು ಮುಚ್ಚಿದ ಲಕೋಟೆಯಲ್ಲಿಡಲು ತೀರ್ಮಾನಿಸಲಾಯಿತು. ಕ್ರಮ ಸಂಖ್ಯೆ 18ರಲ್ಲಿರುವ ಶ್ರೀ ಚಂದ್ರಕಾಂತ ವೆಂಕಮನಿ ಮತ್ತು ಕ್ರಮ ಸಂಖ್ಯೆ 25ರಲ್ಲಿರುವ ಶ್ರೀ ರಮಾಕಾಂತ್ ಎನ್ ಶೇಟ್ ಇವರು ನಿಗಧಿಪಡಿಸಿರುವ ಇಲಾಖಾ ಪರೀಕ್ಷೆಯಾದ ಜನರಲ್ ಭಾಗ-1ನ್ನು ಪಾಸು ಮಾಡದ ಕಾರಣ ಹಾಗು ಕ್ರಮ ಸಂಖ್ಯೆ 26ರಲ್ಲಿರುವ ಶ್ರೀ ಎ ಶಫೀಉಲ್ಲಾರವರು ಅಕೌಂಟ್ಸ್ ಹೈಯರ್ ಪಾಸಾಗಿಲ್ಲದ ಕಾರಣ ಇವರುಗಳನ್ನು ಹೊರತುಪಡಿಸಿ ಉಳಿದ 23 ಪ್ರಥಮ ದರ್ಜೆ ಸಹಾಯಕರು ಮತ್ತು 04 ಶೀಘ್ರಲಿಪಿಗಾರರಿಗೆ ವೇತನ ಶ್ರೇಣಿ ರೂ.10,000-18,150ರ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡಲು ಸಭೆಯು ತೀರ್ಮಾನಿಸಿತು.

(ಜಿ ಹೆಚ್ ದ್ರಾಕ್ಷಾಯಿಣಿದೇವಿ,),
ಜಂಟಿ ನಿರ್ದೇಶಕರು (ಆಡಳಿತ).

(ವಿ ರಶ್ಮಿ, ಐ ಎ ಎಸ್),
ಆಯುಕ್ತರು.

(ಮುಟ್ಟಯ್ಯ),
ಉಪ ನಿರ್ದೇಶಕರು (ಆಡಳಿತ).